# ಸುತ್ತೋಲೆ

03.06.2009

ವಿಷಯ : ಸಾರ್ವಜನಿಕರ /ಉದ್ದಿಮೆದಾರರ ಕುಂದುಕೊರತೆಗಳಿಗೆ ಸ್ಪಂದಿಸಿ ಸಮಂಜಸ ಕ್ರಮ ಕೈಗೊಳ್ಳುವ ಬಗ್ಗೆ

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಸ್ಥೆಯಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಹಾಗು ಸಾಲ ಪಡೆದಿರುವ ಉದ್ದಿಮೆದಾರರು ಯಾವುದಾದರೂ ಕುಂದುಕೊರತೆಗಳು ಇದ್ದಲ್ಲಿ ಸಂಸ್ಥೆಯ ಉದ್ಯೋಗಿಗಳು / ಅಧಿಕಾರಿಗಳು ಸರಿಯಾಗಿ ಸ್ಪಂದಿಸದೆ ಹಾಗು ಸಮಂಜಸವಾಗಿ ಕ್ರಮ ಕೈಗೊಳ್ಳದಿರುವುದು ಗಮನಕ್ಕೆ ಬಂದಿರುತ್ತದೆ. ಸಾರ್ವಜನಿಕರ / ಗ್ರಾಹಕರ ಕುಂದುಕೊರತೆಗಳಿಗೆ ಉದ್ಯೋಗಿಗಳು / ಅಧಿಕಾರಿಗಳು ನಿಗದಿತ ಸಮಯದೊಳಗೆ ದೂರುಗಳನ್ನು ಸ್ವೀಕರಿಸಿ ವಿಲೇವಾರಿ ಮಾಡದೆ ಬೇಜವಾಬ್ದಾರಿ ಹಾಗು ವಿಳಂಬ ನೀತಿಗಳನ್ನು ಅನುಸರಿಸುತ್ತಿರುವುದಾಗಿ ದೂರುಗಳು ಬಂದಿರುತ್ತದೆ. ಇದಲ್ಲದೆ ಭಾರತ ಸರ್ಕಾರದ ಹಾಗು ರಾಜ್ಯ ಸರ್ಕಾರದ ಚುನಾಯಿತ ಪ್ರತಿನಿಧಿಗಳು ಉದ್ಯಮಿಗಳ /ಸಾರ್ವಜನಿಕರ ಪರವಾಗಿ ಯಾವುದಾದರೂ ಮಾಹಿತಿಗಳನ್ನು ಪಡೆಯಲು ಇಚ್ಛಿಸಿದಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗದೆ ಮಾಹಿತಿಗಳನ್ನು ನೀಡುವಲ್ಲಿ ಉತ್ತಮ ಪ್ರತಿಕ್ರಿಯೆಗಳು ಬರುತ್ತಿಲ್ಲವೆಂದು ಸಾರ್ವಜನಕರ ಪ್ರತಿನಿಧಿಗಳಿಂದ ದೂರುಗಳು ಬಂದಿರುತ್ತದೆ. ಇತ್ತೀಚೆಗೆ ಸಂಸ್ಥೆಯ ಕೆಲವು ಉದ್ದಿಮೆದಾರರು ಸಾಲ ಮಂಜೂರಾತಿ / ವಿತರಣೆ ಹಾಗು ಓ.ಟಿ.ಎಸ್. ಇತರೆ ಸೌಲಭ್ಯಗಳನ್ನು ವಿಸ್ತರಿಸುವ ಸಂದರ್ಭದಲ್ಲಿ ಉದ್ಯೋಗಿಗಳು / ಅಧಿಕಾರಿಗಳು ಹಣ ಹಾಗು ಇತರ ಅಮಿಷಗಳು ನೀಡಿದಲ್ಲಿ ಮಾತ್ರ ಕೆಲಸ ಕಾರ್ಯಗಳನ್ನು ಮಾಡುವುದಾಗಿ ಉದ್ಯಮಿಗಳಿಗೆ ತಿಳಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ದುರ್ವರ್ತನೆ ಸಿಬ್ಬಂದಿ ನಿಯಮಾವಳಿ ಉಲ್ಲಂಘನೆಯಾಗಿರುತ್ತದೆ. ಸಂಸ್ಥೆಯ ಎಲ್ಲಾ ಉದ್ಯೋಗಿಗಳು ಸಾರ್ವಜನಿಕರ ಕುಂದುಕೊರತೆಗಳು ಇದ್ದಲ್ಲಿ ಹಾಗು ಚುನಾಯಿತ ಪ್ರತಿನಿಧಿಗಳು ಯಾವುದಾದರೂ ಮಾಹಿತಿಗಳು ಪಡೆಯಲು ಇಚ್ಛಿಸಿದಲ್ಲಿ ಅಂತಹ ಮಾಹಿತಿಗಳನ್ನು ಅದ್ಯತೆ ಮೇರೆಗೆ ಅತಿ ಪ್ರಾಮುಖ್ಯತೆಯನ್ನು ನೀಡಿ ಮಾಹಿತಿಗಳನ್ನು ಕೂಡಲೇ ನೀಡಲು ಕ್ರಮ ಕೈಗೊಳ್ಳತಕ್ಕದ್ದು. ಯಾವುದೇ ಉದ್ಯೋಗಿಯು / ಅಧಿಕಾರಿಯು ಉದ್ದಿಮೆದಾರರಿಂದ ಲಂಚ ಮತ್ತು ಇತರೆ ಅಮಿಷಗಳನ್ನು ನೀಡುವಂತೆ ಅಪೇಕ್ಷಿಸಿದಲ್ಲಿ ಅಂತಹ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ ಉದ್ಯೋಗಿಗಳ / ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತು ಕ್ರಮ ಜರುಗಿಸಿ ಅಮಾನತ್ತಿಲಿಟ್ಟು ಇಲಾಖಾ ತನಿಖೆ ಏರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು. ಈ ಸುತ್ತೋಲೆಯನ್ನು ಎಲ್ಲಾ ಉದ್ಯೋಗಿಗಳ ಗಮನಕ್ಕೆ ತರುವುದಲ್ಲದೆ ಹಾಗು ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ:
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ /ವಲಯ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು ಮತ್ತು ಧಾರವಾಡ

ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರುಗಳಿಗೆ

ವ್ಯನಿ. ರವರ ವಿ.ಕ.ಅಧಿಕಾರಿಯವರಿಗೆ
ಅಧ್ಯಕ್ಷರು, ಕರಾಹಸಂ ನೌಕರರ/ಅಧಿಕಾರಿಗಳ/ಪ.ಜಾ & ಪ.ಪಂ ನೌಕರರ ಸಂಘ, ಪ್ರಧಾನ ಕಛೇರಿ

ಗ್ರಂಥಾಲಯ /ಸೂಚನಾ ಫಲಕಕ್ಕೆ
ಕಛೇರಿ ಪ್ರತಿ